ಮಧ್ಯಂತರ ಅರ್ಜಿ ಸಂಖ್ಯೆ **7** ರಿಂದ **9** ರ ಮೇಲೆ ಆದ ಆದೇಶದ ಮೇರೆಗೆ
ದಿಃ **24.06.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
<u>ಮುಂದುವರೆದ ಮುಖ್ಯ ವಿಚಾರಣೆ : ಪ್ರತಿವಾದಿಯರ ಪರ ವಕೀಲರವರಿಂದ:</u>

ನಾನು 1961-1962 ರಿಂದ 1963-1964 ನೇ ಸಾಲಿಗೆ ಸಂಬಂಧಿಸಿದ ದಾವಾಸ್ವತ್ತಿನ ಕೈಬರಹ ಪಹಣಿ ಪತ್ರಿಕೆಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-1 ಎಂದು, ದಾವಾ ಸ್ವತ್ತಿನ 2010-2011 ನೇ ಸಾಲಿನ ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಅದನ್ನು ನಿಡಿ-2 ಎಂದು, ದಾವಾ ಸ್ವತ್ತಿನ 2012-2013 ನೇ ಸಾಲಿನ ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಅದನ್ನು ನಿಡಿ-3 ಎಂದು, ದಾವಾ ಸ್ವತ್ತಿನ 2014-2015 ನೇ ಸಾಲಿನ ಪಹಣಿ ಪತ್ರಿಕೆ ಹಾಜರುಪಡಿಸಿದ್ದು, ಅದನ್ನು ನಿಡಿ-4 ಎಂದು, ದಿಃ 26-06-2002 ರಂದು ಸಹಾಯಕ ಕಮೀಷನರ ರವರು ಮಾಡಿದ ಮಂಜೂರಾತಿ ಆದೇಶ ಇದರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-5 ಎಂದು, ಹಕ್ಕು ದಾಖಲೆ ಸಂಖ್ಯೆ 771 ರ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-6 ಎಂದು, ಪ್ರತಿವಾದಿ 1 ರವರು ಪ್ರತಿವಾದಿ 2 ರವರಿಗೆ ದಾವಾಸ್ವತ್ತಿನಲ್ಲಿನ ಭಾಗವನ್ನು ದಿಃ 21-06-2010 ರಂದು ಮಾರಾಟ ಮಾಡಿರುವ ನೋಂದಾಯಿತ ಖರೀದಿ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಡಿ-7 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ